<u>ಅಸಲು ದಾವಾಃ</u> - 196/2015 ಪಿ.ಡಬ್ಲ್ಯೂ-1

ದಿನಾಂಕಃ 12.11.2024 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.ಎಸ್ ಎಂ ಬಿ ವಕೀಲರಿಂದ</u>

ಮೂಲ ಓಎಸ್ ನಂ.196/15 ರ ದಾವೆಯಲ್ಲಿ ಏನು ಆದೇಶ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. ನಾನು ಯಾವ ಪರಿಹಾರ ಕೋರಿ ದಾವೆ ಹಾಕಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಸೈಟ್ ನನಗೆ ಬೇಕು ಎಂದು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಮಾಲೀಕತ್ವ ಪರಿಹಾರ ಕೋರಿ ಮೊದಲು ಹಾಕಿದ್ದ ಓಎಸ್ ನಂ.196/15 ವಜಾ ಆಗಿರುವ ಆದೇಶದ ಮೇಲೆ ತಾಲ್ಲೂಕು ಪಂಚಾಯತಿಗೆ ಖಾತಾ ಬದಲಾವಣೆಗಾಗಿ ಅರ್ಜಿ ಕೊಟ್ಟಿರುತ್ತೇನೆ ಎಂದರೆ ಸರಿ. ತಾಲ್ಲೂಕು ಪಂಚಾಯತಿ ಇಓ ರವರ ಆದೇಶದ ವಿರುದ್ಧ ಪ್ರತಿವಾದಿ ಕುಂದೂರು ಗ್ರಾಮ ಪಂಚಾಯತಿಯಲ್ಲಿ ತಕರಾರು ಸಲ್ಲಿಸಿದ್ದರು ಎಂದರೆ ನೆನಪಿಲ್ಲ. ಗ್ರಾಮ ಪಂಚಾಯತಿಯವರು ದಾವಾ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯವರು ತಕರಾರು ಸಲ್ಲಿಸಿದ್ದರಿಂದ ಮುಂದಿನ ಸಿವಿಲ್ ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು ಪ್ರತಿವಾದಿಯ ಹೆಸರಿನಿಂದ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿರುತ್ತಾರೆ ಎಂದರೆ ನೆನಪಿಲ್ಲ. ದಿಃ 22.07.1995 ರಂದು ಕುಂದೂರು ಗ್ರಾಮ ಪಂಚಾಯತಿಯಲ್ಲಿ ಸಭಾ ನಡವಳಿಕೆ ಮೂಲಕ ಪಂಚಾಯತಿಯವರು ಆಶ್ರಯ ಯೋಜನೆಯ ಫಲಾನುಭವಿ ಪಟ್ಟಿಯಲ್ಲಿ ಪ್ರತಿವಾದಿಯ ಹೆಸರನ್ನು ಸೇರಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿ ಈಗ ಎಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿಯು ಬೆಳಗೆರೆ ಯಲ್ಲಿ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸವಿದ್ದರು ಸಹ ಬೆಳಗೆರೆಯಲ್ಲಿ ವಾಸವಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸವಿರುವ ಬಗ್ಗೆ ಮನೆ ಕಂದಾಯ ಕೂಡ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. 2007 ರಿಂದಲೂ ಸಹ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ವಾಸವಿದ್ದು ಪಂಚಾಯತಿಗೆ ಕಂದಾಯ ಕೂಡ ಕಟ್ಟಿರುವ ಬಗ್ಗೆ ದಾಖಲೆಗಳು ಇರುತ್ತವೆ ಎಂದರೆ ಸರಿಯಲ್ಲ.

ದಿಃ 05.09.2006 ರಿಂದ  ಪ್ರತಿವಾದಿಯ ಹೆಸರಿನಲ್ಲಿ ವಿದ್ಯುತ್ ಕಂದಾಯ ಬಿಲ್ಲುಗಳು ಸಹ ಇರುತ್ತವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ